ಹುಬ್ಬಳ್ಳಿ ಮಹಾನಗರದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ.

1620 (2164) ಶ್ರೀ ಅಶೋಕ್ ಶಂಕರ ಕಾಟ್ವೆ (ಹುಬ್ಬಳ್ಳಿ) :— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಬ್ಬಳ್ಳಿ ಮಹಾನಗರದಲ್ಲಿ ಮತದಾರರ ಪಟ್ಟಿಯಲ್ಲಿ ಹೊಸದಾಗಿ ಹೆಸರನ್ನು ಸೇರ್ಪಡೆ ಮಾಡಲು ಸ್ವೀಕರಿಸಲಾದ ಅರ್ಜಿಗಳ ಒಟ್ಟು ಸಂಖ್ಯೆ ಎಷ್ಟು?

ಆ) ಅರ್ಜಿ ಫಾರ್ಮುಗಳ ಕೊರತೆಯಿಂದ ಇನ್ನೂ ಅನೇಕ ಅರ್ಜಿದಾರರು ತಮ್ಮ ಹೆಸರು ಸೇರ್ಪಡೆ ಸಲುವಾಗಿ ಅಲೆದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :—

ಅ) 5,748

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಹುಬ್ಬಳ್ಳಿ ಮಹಾನಗರದಲ್ಲಿ ಪಡಿತರ ಸೀಮೆಎಣ್ಣೆ ಪೂರೈಕೆ.

1621(2294) ಶ್ರೀ ಅಶೋಕ್ ಶಂಕರ ಕಾಟ್ವೆ, (ಹುಬ್ಬಳ್ಳಿ) :— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಬ್ಬಳ್ಳಿ ಮಹಾನಗರದಲ್ಲಿ ಪಡಿತರ ಸೀಮೆಎಣ್ಣೆ ಪೂರೈಸುವ ಡಿಪೋಗಳಲ್ಲಿ ಒಂದು ಬ್ಯಾರೆಲ್‌ಗೆ ರೂ.11-00 ಹೆಚ್ಚಿಗೆ ತೆಗೆದುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಜರುಗಿಸಿದ ಕ್ರಮವೇನು;

ಇ) ಜನವರಿ 1999ರಿಂದ ಇಲ್ಲಿಯವರೆಗೆ ಪಡಿತರ ಚೀಟಿ ಪಡೆದವರಿಗೆ ಸೀಮೆಎಣ್ಣೆ ಕೂಪನ್‌ನ್ನು ವಿತರಿಸಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಯಾವಾಗ ವಿತರಿಸಲಾಗುವುದು?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :—

ಅ) ಹೌದು, ಜಿಲ್ಲಾ ಕಛೇರಿಗೆ ಈ ಬಗ್ಗೆ ದೂರು ಬಂದಿದೆ.

ಆ) ವಿಚಾರಣಾ ಸಮಯದಲ್ಲಿ ಮೇಲಿನ ದೂರುಗಳು ಸಾಬೀತಾಗಿರುವುದಿಲ್ಲ. ಆದರೂ ವಿಚಾರಣಾ ಸಮಯದಲ್ಲಿ ಇತರ ಲೋಪದೋಷಗಳು ಕಂಡು ಬಂದಿದ್ದರಿಂದ ಇಬ್ಬರು ಸೀಮೆ ಎಣ್ಣೆ ಸಗಟು ನಾಮಿನಿದಾರರ ಭದ್ರತಾ ಠೇವಣಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಇ) ಹೌದು, 1999 ಜನವರಿಯ ನಂತರ ಪಡಿತರ ಚೀಟಿ ಪಡೆದವರಿಗೆ ಸೀಮೆಎಣ್ಣೆ ಕೂಪನ್‌ನ್ನು ವಿತರಿಸಿರುವುದಿಲ್ಲ. ಪಡಿತರ ಚೀಟಿದಾರರಿಗೆ ಅನಾನುಕೂಲವಾಗಬಾರದೆಂಬ ದೃಷ್ಟಿಯಿಂದ ತಾತ್ಕಾಲಿಕವಾಗಿ ಸೀಮೆಎಣ್ಣೆಯನ್ನು ಅವರ ಪಡಿತರ ಚೀಟಿಯ ಮೂಲಕ ವಿತರಿಸಲು ವ್ಯವಸ್ಥೆಯನ್ನು ಮಾಡಲಾಗಿದೆ. ಆದ್ಯತೆಯ ಮೇರೆಗೆ ಕೂಪನ್‌ಗಳನ್ನು ಮುದ್ರಿಸಿ ಪಡಿತರ ಚೀಟಿದಾರರಿಗೆ ಹಂಚಲು ಕ್ರಮ ಕೈಗೊಳ್ಳಲಾಗುವುದು.

ಹುಬ್ಬಳ್ಳಿ ನಗರದಲ್ಲಿ ಪಡಿತರ ಧಾನ್ಯಗಳನ್ನು ಅನಧಿಕೃತವಾಗಿ ಹಮಾಲಿ ಮಾಡುತ್ತಿರುವುದು.

1622(2295) ಶ್ರೀ ಅಶೋಕ್ ಶಂಕರ ಕಾಟ್ವೆ (ಹುಬ್ಬಳ್ಳಿ) :— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಬ್ಬಳ್ಳಿ ಮಹಾನಗರದಲ್ಲಿ ಪಡಿತರ ಧಾನ್ಯಗಳನ್ನು ವಿತರಣೆ ಮಾಡುವ ಡಿಪೋಗಳಲ್ಲಿ ಪಡಿತರ ಅಂಗಡಿಕಾರರಿಂದ ಅನಧಿಕೃತವಾಗಿ ಹಮಾಲಿ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಒಂದು ಚೀಲ ಅಕ್ಕಿಗೆ 2 ಕೆ.ಜಿ. ಅಕ್ಕಿ ಕಡಿಮೆ ಬರುವುದು ಹಾಗೂ ಸರಿಯಾಗಿ ತೂಕ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಈ ಬಗ್ಗೆ ಎಲೆಕ್ಟ್ರಾನಿಕ್ ತೂಕ ಮಾಡುವ ಯಂತ್ರ ಅಳವಡಿಸಲು ಕ್ರಮ ಕೈಗೊಳ್ಳಲಾಗುವುದೇ?

ಅ) ಇಲ್ಲಾ

ಆದರೆ ಪಡಿತರ ಅಂಗಡಿಕಾರರಿಂದ ದೂರು ಬಂದರೆ ವಿಚಾರಣೆ ಮಾಡಲಾಗುವುದು.

ಆ) ಇಲ್ಲಾ

ಇ) ಪ್ರಶ್ನೆ ಉದ್ಭವಿಸುವುದಿಲ್ಲ.